ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ದಿಮೆ)

**ನಂ.ಕಾವೇರಿ ಭವನ, 9ನೇ ಮಹಡಿ, ಇ ಮತ್ತು ಎಫ್ ಬ್ಲಾಕ್, ಕೆಂಪೇಗೌಡ ರಸ್ತೆ,ಬೆಂಗಳೂರು-560009.**

| | | |
|---|---|---|
| 1. | ಯೋಜನೆಯ ಹೆಸರು: | **ಬಸವ ವಸತಿ ಯೋಜನೆ**<br>(ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಗುಡಿಸಲುವಾಸಿಗಳಿಗೆ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ವಸತಿ ಕಲ್ಪಿಸುವ ಯೋಜನೆ.) |
| 2. | ಪ್ರತಿ ಮನೆಗೆ ಆರ್ಥಿಕ ಸಹಾಯ: | ಸಹಾಯಧನ: ರೂ. 1,20,000/- (ರಾಜ್ಯ ಸರ್ಕಾರದ ಸಹಾಯಧನ)<br><br>ಮೀಸಲಾತಿ: ಸಾಮಾನ್ಯ 90%, ಅಲ್ಪಸಂಖ್ಯಾತ 10%<br>*ಸಾಮಾನ್ಯ ವರ್ಗ ಎಂದರೆ ಪರಿಶಿಷ್ಟ ಜಾತಿ/ಪಂಗಡ ಹಾಗೂ ಅಲ್ಪಸಂಖ್ಯಾತ ವರ್ಗದವರನ್ನು ಹೊರತುಪಡಿಸಿ ಇತರೆ ಎಲ್ಲಾ ವರ್ಗದವರನ್ನು ಸಾಮಾನ್ಯ ವರ್ಗ ಎಂದು ಪರಿಗಣಿಸಲಾಗುತ್ತದೆ. |
| 3. | ಫಲಾನುಭವಿಗಳ ಆಯ್ಕೆ: | ಸರ್ಕಾರದ ಸುತ್ತೋಲೆ ಸಂಖ್ಯೆ: ವಇ 1 ಹೆಚ್‌ಎವೈ 2018, ದಿನಾಂಕ: 26.05.2018ರನ್ವಯ ಸಮೀಕ್ಷೆ ಪಟ್ಟಿಯಲ್ಲಿರುವ ಅರ್ಹ ವಸತಿರಹಿತರನ್ನು ಆಯ್ಕೆಗೆ ಪರಿಗಣಿಸುವುದು. ಒಂದು ವೇಳೆ ಸರ್ಕಾರದ ಆದೇಶ ಸಂಖ್ಯೆ: ವಇ 12 ಹೆಚ್‌ಎಹೆಚ್ 2022, ದಿನಾಂಕ:18.02.2022ರಲ್ಲಿ ತಿಳಿಸಿದಂತೆ 2018 ರಲ್ಲಿ ಕೈಗೊಳ್ಳಲಾದ ಸಮೀಕ್ಷೆ ಪಟ್ಟಿಯಲ್ಲಿನ ಫಲಾನುಭವಿಗಳ ಅರ್ಹತೆಯನ್ನು ಮತ್ತೊಮ್ಮೆ ಪರಿಶೀಲಿಸಿ ಅನರ್ಹರಿದ್ದಲ್ಲಿ ಕೈಬಿಟ್ಟು ಪಟ್ಟಿಯನ್ನು ಪರಿಷ್ಕರಿಸಿಕೊಳ್ಳಲು ಹಾಗೂ ಅರ್ಹರು ಕಂಡುಬಂದಲ್ಲಿ ಪಟ್ಟಿಗೆ ಸೇರಿಸಿಕೊಂಡು ಪರಿಷ್ಕೃತ ಪಟ್ಟಿಯಲ್ಲಿನ ಫಲಾನುಭವಿಗಳನ್ನು ಪರಿಗಣಿಸಬಹುದಾಗಿದೆ.<br><br>ಗ್ರಾಮಸಭೆಗಳಲ್ಲಿ ಅರ್ಹ ವಸತಿರಹಿತರು ನಿಗದಿಪಡಿಸಿದ ವರ್ಗವಾರು ಗುರಿಗಿಂತ ಅಧಿಕವಾಗಿದ್ದಲ್ಲಿ ಲಭ್ಯವಿರುವ ಅರ್ಹ ವಸತಿರಹಿತರ ಪಟ್ಟಿಯಿಂದ ಲಾಟರಿ ಮೂಲಕ ಫಲಾನುಭವಿಗಳನ್ನು ಗ್ರಾಮಸಭೆ ಮುಖಾಂತರ ಮೂಲಕ ಆಯ್ಕೆ ಮಾಡಿ ಸಂಬಂಧಪಟ್ಟ ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಯ ಅನುಮೋದನೆಯೊಂದಿಗೆ ನಿಗಮವು ಅನುಮೋದನೆ ನೀಡಿ ಅನುಷ್ಠಾನಗೊಳಿಸಲಾಗುವುದು. |
| 4. | ಯೋಜನೆಯ ಅನುಷ್ಠಾನ: | ➢ ಗ್ರಾಮ ಸಭೆಗಳಲ್ಲಿ ಗುರಿಗನುಗುಣವಾಗಿ ಫಲಾನುಭವಿಗಳನ್ನು ಲಾಟರಿ ಮೂಲಕ ಆಯ್ಕೆಗೊಳಿಸಲಾಗುವುದು.<br>➢ ಗ್ರಾಮ ಸಭೆ ನಡೆದ ಬಗ್ಗೆ ಠರಾವು ಮತ್ತು ವಿಡಿಯೋ ಚಿತ್ರೀಕರಣಗೊಳಿಸುವುದು.<br>➢ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಯಲ್ಲಿ ಪರಿಶೀಲನೆ ಹಾಗೂ ಡಿಜಿಟಲ್ ಸಹಿ ನೀಡುವ ಮೂಲಕ ಪಟ್ಟಿಗೆ ಅನುಮೋದನೆ. |
| 5. | ಫಲಾನುಭವಿಗಳ ಅರ್ಹತೆ ಮತ್ತು ಷರತ್ತುಗಳು: | 1. ಫಲಾನುಭವಿಯು ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರಬೇಕು ಮತ್ತು ಸ್ವಂತ ನಿವೇಶನ ಹೊಂದಿರಬೇಕು.<br>2. ಫಲಾನುಭವಿಯು ಆರ್ಥಿಕವಾಗಿ ಹಿಂದುಳಿದಿದ್ದು, ವಾರ್ಷಿಕ ಆದಾಯ ರೂ. 1,20,000/- ರೊಳಗಿರಬೇಕು.<br>3. ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ವಸತಿ ಸೌಲಭ್ಯ ಪಡೆದಿರಬಾರದು.<br>4. ಮನೆಗಳ ವಿಸ್ತೀರ್ಣ ಮತ್ತು ವಿನ್ಯಾಸ : ಕನಿಷ್ಟ 250 ಚದರ ಅಡಿಗಳು ಹಾಗೂ ಗರಿಷ್ಟ 700 ಚದರ ಅಡಿಗಳು ನೆಲಗಟ್ಟು ವಿಸ್ತೀರ್ಣ ಇರುವಂತೆ ಮನೆ ನಿರ್ಮಿಸಬೇಕು. ಇದಕ್ಕಾಗಿ ಯಾವುದೇ ನಕ್ಷೆ ಅಥವಾ ವಿನ್ಯಾಸ ನಿಗದಿಪಡಿಸಿರುವುದಿಲ್ಲ. ಆದರೆ ಫಲಾನುಭವಿಗಳಿಗೆ ಅನುಕೂಲವಾಗುವಂತೆ |

| | | |
|---|---|---|
| | | ಮಣ್ಣು, ಹವಾಗುಣ, ಪರಿಸ್ಥಿತಿ, ಸ್ಥಳೀಯವಾಗಿ ಲಭ್ಯವಿರುವ ಸಾಮಾಗ್ರಿಗಳ ಬಳಕೆ ಇತ್ಯಾದಿ ಅಂಶಗಳನ್ನು ಪರಿಗಣಿಸಿ ಪ್ರದೇಶವಾರು ಮತ್ತು ಬದಲಿ ವಿನ್ಯಾಸಗಳನ್ನು ಅನುಸರಿಸಬಹುದು. ಮನೆ ನಿರ್ಮಾಣದ ಪ್ರತಿ ಹಂತದಲ್ಲಿಯೂ ಫಲಾನುಭವಿಯು ಸಕ್ರಿಯವಾಗಿ ಪಾಲ್ಗೊಂಡು ಒಳ್ಳೆಯ ಗುಣಮಟ್ಟದ ಹಾಗೂ ಹೆಚ್ಚಿನ ಸೌಲಭ್ಯಗಳನ್ನು ಹೊಂದಬಹುದು.<br>ಒಟ್ಟಾರೆ ಆಗಿಂದ್ದಾಗೆ ಸರ್ಕಾರವು ಬಸವ ವಸತಿ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ವಿಧಿಸಬಹುದಾದ ನಿಯಮ ಮತ್ತು ಷರತ್ತುಗಳನ್ನು ತಪ್ಪದೇ ಪಾಲಿಸಬೇಕು. |
| 6. | ಯೋಜನೆಯ ಪ್ರಮುಖ ಅಂಶಗಳು: | ➢ ಆನ್-ಲೈನ್ ನಲ್ಲಿ ಕಾಮಗಾರಿ ಆದೇಶ ನೀಡುವಿಕೆ.<br>➢ ಜಿ.ಪಿ.ಎಸ್ ಆಧಾರಿತ ಭೌತಿಕ ಪ್ರಗತಿ ಪರಿಶೀಲನೆ.<br>➢ ಫಲಾನುಭವಿಗಳ ಖಾತೆಗೆ ನೇರವಾಗಿ ಅನುದಾನ ಬಿಡುಗಡೆ.<br>➢ ಅನುದಾನ ಬಿಡುಗಡೆಯ ವಿವರವನ್ನು ಎಸ್ ಎಂ ಎಸ್ ಮೂಲಕ ಫಲಾನುಭವಿಗಳಿಗೆ ಮಾಹಿತಿ. |

**ಫಲಾನುಭವಿಯಿಂದ ಈ ಕೆಳಕಂಡ ಎಲ್ಲಾ ಮಾಹಿತಿಯು ಆನ್ ಲೈನ್ ಆಧಾರಿತವಾಗಿದ್ದು, ಭೌತಿಕ ದಾಖಲೆಗಳನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ.**

1. ಆಧಾರ್ ಸಂಖ್ಯೆ.
2. ಪಡಿತರ ಚೀಟಿ.
3. ಆದಾಯ ಮತ್ತು ಜಾತಿ ಪ್ರಮಾಣ ಪತ್ರ.
4. ನಿವೇಶನದ ಖಾತಾ ಪತ್ರ/ಪಹಣಿ/ಹಕ್ಕುಪತ್ರ.
5. ಗ್ರಾಮ ಪಂಚಾಯಿತಿ ವತಿಯಿಂದ ಕಟ್ಟಡ ಲೈಸೆನ್ಸ್.
6. ವಸತಿ ಯೋಜನೆಯ ಯಶಸ್ವಿ ಅನುಷ್ಠಾನದ ಬಗ್ಗೆ ಸಂಬಂಧಿಸಿದ ಇತರೆ ಮಾಹಿತಿ ಇತ್ಯಾದಿ.

**ಹೆಚ್ಚಿನ ವಿವರಗಳಿಗೆ ಈ ಕೆಳಕಂಡವರನ್ನು ಸಂಪರ್ಕಿಸಿ:**

1. ಕಾವೇರಿ ಭವನ, 9ನೇ ಮಹಡಿ, ಇ ಮತ್ತು ಎಫ್ ಬ್ಲಾಕ್ ಕೆ.ಜಿ.ರಸ್ತೆ, ಬೆಂಗಳೂರು-560 009. (ದೂರವಾಣಿ 080-23118888, ಫ್ಯಾಕ್ಸ್ 080 22347317), ಈ-ಮೇಲ್ rgrhcl@rediffmail.com, ವೆಬ್ ಸೈಟ್:http://ashraya.karnataka.gov.in.
2. ಸಂಬಂಧಪಟ್ಟ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
3. ಸಂಬಂಧಪಟ್ಟ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಣಾಧಿಕಾರಿಗಳು,
4. ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು/ಕಾರ್ಯದರ್ಶಿಗಳು.

**********